ಅ) ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯುವ ಕಾಲದಲ್ಲಿ ನಿಗದಿಯಾಗಿದ್ದ ಪ್ರತಿ ಶತ 15 ರಷ್ಟು ಅಂಕವನ್ನು ಪ್ರತಿ ಶತ ಕೇವಲ 5 ರಷ್ಟಕ್ಕೆ ಇಳಿಸಿರುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲದಿದ್ದಲ್ಲಿ ಇತ್ತೀಚಿನ ಬಿ.ಇ. ಹಾಗೂ ಎಂಬಿಬಿಎಸ್ ನಂತಹ ಕೋರ್ಸುಗಳಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಸಿಕ್ಕಿರಬಹುದಾದ ಪ್ರವೇಶದ ಅನುಪಾತವೇನು?

ಇ) ಇದನ್ನು ಸರಿಪಡಿಸುವುದು ಸಾಮಾಜಿಕ ನ್ಯಾಯವಲ್ಲವೇ? ನ್ಯಾಯವಾದಲ್ಲಿ ಮತ್ತೆ ಶೇ. 15 ರಷ್ಟಕ್ಕೆ ಹೆಚ್ಚುವರಿ ಅಂಕಗಳನ್ನು ಕೊಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಕರ್ನಾಟಕ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ಕೋರ್ಸ್‌ಗಳಿಗೆ ಅಭ್ಯರ್ಥಿಗಳ ಪ್ರವೇಶ ಕುರಿತ ಆಯ್ಕೆ ನಿಯಮಗಳನ್ವಯ ಮೀಸಲಿಡಲಾಗಿರುವ ಒಟ್ಟು ಫ್ರೀ ಸೀಟುಗಳಲ್ಲಿ ಭಾರತ ಸರ್ಕಾರ ನಿಯೋಜಿಸಿರುವ ಅಭ್ಯರ್ಥಿಗಳು, ಎನ್‌ಸಿಸಿ, ಸೈನಿಕರ ಮಕ್ಕಳು ಹಾಗೂ ಮತ್ತಿತರಿಗೆ ಮೀಸಲಾತಿ ನೀಡಿದ ನಂತರ ಉಳಿದ ಸೀಟುಗಳಲ್ಲಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಶೇ. 15 ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ.

ಇ) ಮೇಲಿನ (ಆ) ಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಾಥಮಿಕ ಹಂತದಲ್ಲಿರುವ ಆಂಗ್ಲ ಭಾಷೆಯ ಸಂಸ್ಥೆಯ ಬಗ್ಗೆ

117 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ - ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಹಂತದಲ್ಲಿರುವ ಆಂಗ್ಲ ಭಾಷೆಯ ಶಾಲೆಗಳೆಷ್ಟು?

ಆ) ಬೋಧನಾ ಮಾಧ್ಯಮದ ಬಗ್ಗೆ ಸರ್ಕಾರದ ನಿಲುವೇನು?

ಇ) ಹೊಸದಾಗಿ ಆಂಗ್ಲ ಭಾಷೆಯ ಶಾಲೆಗಳನ್ನು ತೆರೆಯಲು ಮಾನ್ಯತೆ ಕೋರಿ ಬಂದ. ಅರ್ಜಿಗಳೆಷ್ಟು?

ಈ) ಸರ್ಕಾರ ಕೊಟ್ಟ ಪರವಾನಗಿಗಳೆಷ್ಟು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 1207

ಆ) ಪ್ರಾಥಮಿಕ ಶಾಲಾಮಟ್ಟದಲ್ಲಿ 1 ರಿಂದ 4ನೇ ತರಗತಿಯವರೆಗೆ ಮಕ್ಕಳಮಾತೃ ಭಾಷೆ ಅಥವಾ ಕನ್ನಡ ಮಾಧ್ಯಮದಲ್ಲಿ ಬೋಧಿಸುವುದು ಸರ್ಕಾರದ ಶಿಕ್ಷಣ ನೀತಿಯಾಗಿದೆ.

ಇ) 1991-92ರಿಂದ 560 ಅರ್ಜಿಗಳು ಬಂದಿದೆ.

ಈ) ನ್ಯಾಯಾಲಯದ ಆದೇಶದ ಪ್ರಕರಣಗಳನ್ನು ಒಳಗೊಂಡಂತೆ 138 ಶಾಲೆಗಳಿಗೆ ಪ್ರಸ್ತುತ ಸರ್ಕಾರದ ನೀತಿಯಂತೆ 5ನೇ ತರಗತಿಯಿಂದ ಆಂಗ್ಲ ಮಾಧ್ಯಮಕ್ಕೆ ಅನುಮತಿ ನೀಡಲಾಗಿದೆ.

ಶಾಲಾ ಮಕ್ಕಳ ಆಟದ ಮೈದಾನದ ಅತಿಕ್ರಮಣ

142 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?